**ದಿನಾಂಕಃ 23.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಕೆ.ಟಿ.ಟಿ. ವಕೀಲರಿಂದಃ**

1) ನನ್ನ ತಂದೆಗೆ ನಾನು ಒಬ್ಬನೇ ಮಗ. ವಾದ ಪತ್ರದ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ. ದಾವಾ 1 ನೇ ಅನುಸೂಚಿ ಸ್ವತ್ತಿನ ಸಂಃ 1888 ಆಗಿದೆ. ಬಿ ಅನುಸೂಚಿ ಸ್ವತ್ತಿನ ಡೋರ್ ನಂಃ 684/61. ದಾವಾ ಎ ಮತ್ತು ಬಿ ಅನುಸೂಚಿ ಸ್ವತ್ತುಗಳು ನನಗೆ ನನ್ನ ತಂದೆಯ ಮೂಲಕ ಬಂದಿರುತ್ತದೆ. ಸದರಿ ಸ್ವತ್ತುಗಳನ್ನು ನನ್ನ ತಂದೆ ಒಂದೇ ಕ್ರಯಪತ್ರದಡಿಯಲ್ಲಿ ಖರೀದಿ ಮಾಡಿರುತ್ತಾರೆ. ಆ ರೀತಿ ಖರೀದಿ ಮಾಡಿದ ನಂತರ ನನ್ನ ತಂದೆಯ ಹೆಸರಿಗೆ ಕಂದಾಯ ದಾಖಲೆಗಳು ದಾಖಲಾಗಿರುತ್ತವೆ.

2) ದಾವಾ 2 ನೇ ಐಟಂ ಸ್ವತ್ತಿನ 70 X 40 ಅಳತೆಯಲ್ಲಿ ಸುತ್ತಲೂ ಜಾಗ ಬಿಟ್ಟು ಮನೆಯನ್ನು ಕಟ್ಟಿರುತ್ತೇನೆ. ಸದರಿ ಮನೆಯನ್ನು 2018 ರಲ್ಲಿ ಕಟ್ಟಿರುತ್ತೇನೆ. ಸದರಿ ಮನೆಯ ಸುತ್ತಲೂ ಕಾಂಪೌಂಡ್ ಗೋಡೆಯನ್ನು ಕಟ್ಟಿರುತ್ತೇನೆ. ಸದರಿ ಸ್ವತ್ತಿನ ಖಾತೆಯನ್ನು ಹಾಜರುಪಡಿಸಿರುತ್ತೇನೆ. ದಾವಾ 2 ನೇ ಐಟಂ ಸ್ವತ್ತಿನ ಪೂರ್ವ ದಿಕ್ಕಿಗೆ ಈ ಹಿಂದೆ ಶಿವಕುಮಾರ್ ರವರ ಜಾಗ ಇತ್ತು. ಆತನ ಹೆಸರಿಗೆ ಖಾತೆ ಇತ್ತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾ 2 ನೇ ಐಟಂ ಸ್ವತ್ತು ದಾವಾ 1 ನೇ ಐಟಂ ಸ್ವತ್ತಿನ ಉತ್ತರಕ್ಕೆ ಹೊಂದಿಕೊಂಡಂತೆ ಇದೆ ಎಂದರೆ ಸರಿ. ದಾವಾ 1 ನೇ ಐಟಂ ಸ್ವತ್ತಿನ ಖಾತೆ ನನ್ನ ತಂದೆಯ ಹೆಸರಿನಲ್ಲಿ ಇತ್ತು. ದಾವಾ 1 ನೇ ಐಟಂ ಸ್ವತ್ತಿನ ಅಳತೆ 65 X 33 ಆಗಿದ್ದು, ಅದೇ ವಿಸ್ತೀರ್ಣಕ್ಕೆ ಖಾತೆ ದಾಖಲಾಗಿರುತ್ತದೆ. ನಿಪಿ.1ರ ಖಾತಾ ವಹಿಯಲ್ಲಿ ದಾವಾ 1 ನೇ ಐಟಂ ಸ್ವತ್ತಿನ ವಿಸ್ತೀರ್ಣ 65 X 25 ಇದೆ ಎಂದರೆ ಸಾಕ್ಷಿಯು ಅದರಲ್ಲಿ 65 X 33 ಇದೆ ಎಂದು ನುಡಿಯುತ್ತಾರೆ. ದಾವಾ 2 ನೇ ಐಟಂ ಸ್ವತ್ತಿನಲ್ಲಿ 70 X 40 ಕ್ಕೆ ಕಾಂಪೌಂಡ್ ಗೋಡೆ ಕಟ್ಟಿರುತ್ತೇನೆ ಎಂದರೆ ಸರಿ. ನಮ್ಮ ಕ್ರಯಪತ್ರದಲ್ಲಿ 33 ಅಡಿ ಅಳತೆಯಲ್ಲಿ 10 ಅಡಿ ದಾರಿಗಾಗಿ ಬಿಟ್ಟು ಮಾರಾಟ ಮಾಡಿರುವುದಾಗಿ ನಮೂದಿಸಲಾಗಿದೆ ಎಂದರೆ ಸರಿ. ಆದ ಕಾರಣ ನನ್ನ ತಂದೆಯ ಹೆಸರಿಗೆ ಕ್ರಯಪತ್ರದಲ್ಲಿ ಇರುವಂತೆ 65 X 23 ಅಡಿಗೆ ಮಾತ್ರ ಖಾತೆ ಆಗಿದೆ ಎಂದರೆ ಸರಿ.

3) ಶಿವಕುಮಾರ್ ರವರಿಗೆ ಸೇರಿದ ಜಾಗವನ್ನು ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಯ ಆಸ್ತಿಯ ಖರೀದಿ ಪತ್ರದಲ್ಲಿನ ಅಳತೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಇರುವ ಸಂಗತಿಗಳನ್ನು ನಾನು

ತಿಳಿದುಕೊಂಡಿರುತ್ತೇನೆ. ಅದನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಪ್ರತಿವಾದಿಯ ಸ್ವತ್ತಿನ ಅಳತೆ ಸರಿಯಾಗಿ ಇದೆ. ಪ್ರತಿವಾದಿ ತಾನು ಜಾಗವನ್ನು ಖರೀದಿ ಮಾಡಿದ ನಂತರ ಆಸ್ಪತ್ರೆ ಕಟ್ಟಿಸಲು ಪ್ರಯತ್ನ ಮಾಡಿರುತ್ತಾರೆ ಎಂದರೆ ಸರಿ. ಆದಕಾರಣ ಅವರು ತನ್ನ ಜಾಗದಲ್ಲಿ ಮಣ್ಣನ್ನು ತೆಗೆಸಿದ್ದರು ಎಂದರೆ ಸರಿ. ಆ ವೇಳೆಗೆ ನಾನು ಆಕೆಗೆ ತಕರಾರು ಮಾಡಿದ್ದೆನು ಎಂದರೆ ಸರಿ. ಆ ಕಾಲಕ್ಕೆ ಪಂಚಾಯಿತಿದಾರರ ಸಮಕ್ಷಮ ಸ್ವತ್ತುಗಳನ್ನು ಅಳತೆ ಮಾಡಲು ಒಪ್ಪಿದ್ದೆವು.

4) ಪ್ರತಿವಾದಿಯ ಸ್ವತ್ತಿನಿಂದ ಪಶ್ಚಿಮಕ್ಕೆ ಇರುವ ನನ್ನ ಜಾಗದಲ್ಲಿ ಅರ್ಧ ಅಡಿ ಜಾಗ ಬಿಟ್ಟು ನಾನು ಕಾಂಪೌಂಡ್ ಕಟ್ಟಿಕೊಂಡಿರುತ್ತೇನೆ ಎಂದರೆ ಸರಿ. ಆ ವೇಳೆಗೆ ಅರ್ಧ ಅಡಿ ಜಾಗಕ್ಕೆ ಪ್ರತಿವಾದಿಯಿಂದ ರೂ.10,000/- ಹಣವನ್ನು ನಾನು ಪಡೆದುಕೊಂಡು ಆ ಜಾಗವನ್ನು ಬಿಟ್ಟುಕೊಡಲು ಪಂಚಾಯಿತಿದಾರರ ಸಮಕ್ಷಮ ಒಪ್ಪಿಗೆ ಆಗಿತ್ತು ಎಂದರೆ ಸರಿಯಲ್ಲ. ಸದರಿ ಪಂಚಾಯಿತಿಯ ವಿಚಾರವನ್ನು ಬರವಣಿಗೆ ಮಾಡಿದ್ದು, ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಪಂಚಾಯಿತಿ ಮಾಡಿದ ಕಾಲಕ್ಕೆ ಪ್ರತಿವಾದಿಯು ತನ್ನ ಸ್ವತ್ತಿನ ಅಳತೆಯಲ್ಲಿ ಮನೆ ಕಟ್ಟಿಕೊಳ್ಳುವಂತೆ ಒಪ್ಪಿಗೆ ಆಗಿತ್ತು ಎಂದರೆ ಸರಿ. ಅಲ್ಲಿ ಒಪ್ಪಿದಂತೆ ಅಳತೆ ಮಾಡಿದ ಕಾಲಕ್ಕೆ ನಾನು 10 ಅಡಿ ಜಾಗವನ್ನು ಒತ್ತುವರಿ ದಾವಾ 1 ನೇ ಐಟಂ ಸ್ವತ್ತಿನ ಜಾಗದಲ್ಲಿ ಮನೆಯನ್ನು ಕಟ್ಟಿರುತ್ತೇನೆ ಎಂದು ಕಂಡು ಬಂದಿತ್ತು ಎಂದರೆ ಸರಿಯಲ್ಲ. ಆ ರೀತಿ ಅಳತೆ ಮಾಡಿದಾಗ ಪ್ರತಿವಾದಿಯ ಸ್ವತ್ತು ನನ್ನ ಮನೆಯ ದಕ್ಷಿಣ ದಿಕ್ಕಿನ ಗೋಡೆಯವರೆಗೂ ಬಂದಿತ್ತು ಎಂದರೆ ಸರಿಯಲ್ಲ. ನನ್ನ ಮನೆಯ ಕಿಟಕಿಯ ಸಜ್ಜಗಳು ಮತ್ತು ಮುಂಭಾಗದಲ್ಲಿ ಹಾಕಿದ್ದ ಪೋರ್ಟಿಕ್ ಪ್ರತಿವಾದಿಯ ಜಾಗಕ್ಕೆ ಬಂದಿದ್ದವು ಎಂದರೆ ಸರಿಯಲ್ಲ. ಪಂಚಾಯಿತಿಯಲ್ಲಿ ತೀರ್ಮಾನ ಆದಂತೆ ಪ್ರತಿವಾದಿಯು ತನ್ನ ಮನೆಯ ಉತ್ತರ ದಿಕ್ಕಿಗೆ ರಿಟೈನಿಂಗ್ ವಾಲನ್ನು ಕಟ್ಟಿರುತ್ತಾರೆ ಎಂದರೆ ಸರಿ. ಸದರಿ ರಿಟೈನಿಂಗ್ ವಾಲನ್ನು ಕಟ್ಟುವ ಕಾಲಕ್ಕೆ ಅದು ನನ್ನ ಮನೆಯ ಕಿಟಕಿಯ ಸಜ್ಜದ ಮದ್ಯಭಾಗದಲ್ಲಿ ಹಾದು ಹೋಗುತ್ತಿತ್ತು ಎಂದರೆ ಸರಿ. ಆ ವೇಳೆಗೆ ನಾನು ತಕರಾರು ಮಾಡಿದ್ದೆನು ಎಂದರೆ ಸರಿ. ಆ ರೀತಿ ರಿಟೈನಿಂಗ್ ವಾಲನ್ನು ಕಟ್ಟುವ ಸಮಯಕ್ಕೆ ತಕರಾರು ಮಾಡದಂತೆ ಒಪ್ಪಿದ್ದೆನು ಎಂದರೆ ಸರಿ.

5) ನನ್ನ ತಂದೆ ಖಾತೆಯಲ್ಲಿ ನಮೂದಾಗಿದ್ದ ವಿಸ್ತೀರ್ಣಕ್ಕೆ ಮಾತ್ರ ಕಂದಾಯವನ್ನು ಪಾವತಿ ಮಾಡುತ್ತಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಇದ್ದ ಖಾತೆಯಲ್ಲಿನ ಅಳತೆಗೆ ಮಾತ್ರ ನಾನು ಕಂದಾಯವನ್ನು ಕಟ್ಟಿಕೊಂಡು ಬರುತ್ತಿದ್ದೇನೆ. ನಾನು ಪಂಚಾಯಿತಿದಾರರು ನೀಡಿದ ತೀರ್ಪಿಗೆ ವಿರುದ್ದವಾಗಿ ನಾನು ನಡೆದುಕೊಂಡ ಕಾರಣ ಪ್ರತಿವಾದಿ ನನ್ನ ವಿರುದ್ದ ಪೋಲಿಸ್ ಠಾಣೆಗೆ ದೂರು ದಾಖಲಿಸಿದ್ದರು ಎಂಬ ಬಗ್ಗೆ ನನಗೆ

ಗೊತ್ತಿಲ್ಲ. ಆ ಕಾಲಕ್ಕೆ ಪೋಲಿಸರು ನಗರಸಭೆ ಅಧಿಕಾರಿಗಳ ಮುಖಾಂತರ ನನ್ನ ಮತ್ತು ಪ್ರತಿವಾದಿಯ ಸ್ವತ್ತುಗಳನ್ನು ಅಳತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಅಳತೆ ಮಾಡಿ ನಕಾಶೆ ತಯಾರಿಸಿ ಅದರಲ್ಲಿ ನಾನು 10 ಅಡಿ ಜಾಗವನ್ನು ಒತ್ತುವರಿ ಮಾಡಿರುವುದಾಗಿ ತಿಳಿಸಿದ್ದರು ಎಂದರೆ ಸರಿಯಲ್ಲ. ನಾನು ಆ ರೀತಿ ನಕಾಶೆ ಆದ ನಂತರ ಈ ನ್ಯಾಯಾಲಯದಲ್ಲಿ ಒಂದು ದಾವೆಯನ್ನು 65 X 33 ಅಡಿ ಜಾಗಕ್ಕೆ ಹೂಡಿದ್ದೆನು ಎಂದರೆ ಸರಿಯಲ್ಲ.

6) 65 X 33 ಅಡಿ ಜಾಗಕ್ಕೆ ಒಂದು ದಾವೆಯನ್ನು ಹೂಡಿದ್ದೆನು ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ಪರವಾಗಿ ನ್ಯಾಯಾಲಯದಿಂದ ತಾತ್ಕಾಲಿಕ ತಡೆಯಾಜ್ಞೆ ಸಿಕ್ಕಿರುವುದಿಲ್ಲ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆ ರೀತಿ ನನ್ನ ಮಧ್ಯಂತರ ಅರ್ಜಿ ವಜಾ ಆದ ನಂತರ ಮಧ್ಯಸ್ತಿಕೆದಾರರ ಮುಖಾಂತರ ನಾನು ಪ್ರತಿವಾದಿಯ ಜೊತೆ ರಾಜೀ ಆಗಿದ್ದೆನು ಎಂದರೆ ಸರಿ. ರಾಜೀ ಕಾಲಕ್ಕೆ ನಾನು ಪ್ರತಿವಾದಿಯಿಂದ ರೂ.7 ಲಕ್ಷ ಪರಿಹಾರ ಪಡೆದಿರುತ್ತೇನೆ ಎಂದರೆ ಸರಿ. ರಾಜೀಯಲ್ಲಿ ಆದ ನಿಯಮಕ್ಕೆ ಪೂರಕವಾಗಿ ಪ್ರತಿವಾದಿ ಕಟ್ಟಡವನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರತಿವಾದಿ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಿ ಅಲ್ಲಿ ದವಾಖಾನೆಯನ್ನು ನಡೆಸುತ್ತಿದ್ದಾರೆ ಎಂದರೆ ಸರಿ.

7) ಪ್ರತಿವಾದಿಯ ಜೊತೆ ನಾನು ನ್ಯಾಯಾಲಯದಲ್ಲಿ ಮಾಡಿಕೊಂಡ ರಾಜೀ ಅರ್ಜಿಯಲ್ಲಿ ಈ ಪ್ರಸ್ತುತ ದಾವೆಯಲ್ಲಿ ಹೇಳಿದ ಮೊದಲನೇ ಪರಿಹಾರದ ಷರತ್ತು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಬಿ ಅನುಸೂಚಿ ಸ್ವತ್ತು ದಾವಾ 2 ನೇ ಐಟಂ ಸ್ವತ್ತಿನ ಭಾಗವಾಗಿರುತ್ತದೆ. ಪ್ರತಿವಾದಿಯು ತನ್ನ ಜಾಗದಲ್ಲಿ ಕಟ್ಟಡ ಕಾಮಗಾರಿ ಮಾಡುವ ಪೂರ್ವದಲ್ಲಿಯೇ ನಾನು ದಾವಾ 2 ನೇ ಐಟಂ ಸ್ವತ್ತಿನಲ್ಲಿ ಕಾಂಪೌಂಡ್ ಗೋಡೆಯನ್ನು ಕಟ್ಟಿದ್ದೆನು ಎಂದರೆ ಸರಿ. ಈ ಹಿಂದೆ ಲತಾಮಣಿರವರು ನನಗೆ ಸೇರಿದ ದಾವಾ 1 ಮತ್ತು 2 ನೇ ಐಟಂ ಸ್ವತ್ತುಗಳಲ್ಲಿ ಒತ್ತುವರಿ ಮಾಡಿದ ಕಾರಣ ನಾನು ಅವರ ವಿರುದ್ದ ಅಸಲು ದಾವಾ ಸಂಃ 213/2016 ರಂತೆ ದಾವೆಯನ್ನು ಸಲ್ಲಿಸಿದ್ದೆನು. ಸದರಿ ದಾವೆಯನ್ನು ನಾನು ಈ ದಾವೆಯಲ್ಲಿನ 1 ನೇ ಐಟಂ ಸ್ವತ್ತಿಗೆ ಸೇರಿದಂತೆ ಮಾತ್ರ ಒತ್ತುವರಿ ಆಗಿದೆ ಎಂದು ಹೂಡಿದ್ದೆನು ಎಂದರೆ ಸಾಕ್ಷಿಯು ತನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನನ್ನ ಸ್ವತ್ತಿನ ದಕ್ಷಿಣದ ಪೈಕಿ 65 X 4 ಅಡಿ ಜಾಗ ಒತ್ತುವರಿ ಮಾಡಿರುತ್ತಾರೆ ಎಂದು ಹೂಡಿದ್ದೆನು ಎಂಬ ಬಗ್ಗೆ ನನಗೆ ನೆನಪಿಲ್ಲ.

8) ಅಸಲು ದಾವಾ ಸಂಃ 213/2016 ರ ಪ್ರಕರಣವನ್ನು ಹೂಡಿದ ಕಾಲದಲ್ಲಿ ಪ್ರತಿವಾದಿಯು ಕಟ್ಟಡ ಕಾಮಗಾರಿಯನ್ನು ಮಾಡುತ್ತಿದ್ದರು ಎಂದರೆ ಸರಿ. ಸದರಿ

ಪ್ರಕರಣದಲ್ಲಿ ಈ ಪ್ರಸ್ತುತ ಪ್ರಕರಣದಲ್ಲಿನ ದಾವಾ ಬಿ ಅನುಸೂಚಿ ಸ್ವತ್ತಿನ ಬಗ್ಗೆ ಯಾವುದೇ ವಿಚಾರ ತಿಳಿಸಿಲ್ಲ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಈ ಪ್ರಸ್ತುತ ದಾವೆಯನ್ನು ಹೂಡುವ ಕಾಲಕ್ಕೆ ಪ್ರತಿವಾದಿಯು ಆಗಲೇ ನೆಲಹಂತದ ಮತ್ತು ಮೊದಲನೇ ಹಂತದ ಮಹಡಿಯನ್ನು ಪೂರ್ಣಗೊಳಿಸಿದ್ದರು ಎಂದರೆ ಸಾಕ್ಷಿಯು ಆ ರೀತಿ ಕಟ್ಟಡ ಕಟ್ಟಿಲ್ಲ ಎಂದು ನುಡಿಯುತ್ತಾರೆ. ಪ್ರಸ್ತುತ ಈ ದಾವೆ ಹೂಡಿದ ನಂತರ ಪ್ರತಿವಾದಿಯು ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಿದ್ದಾರೆ ಎಂದರೆ ಸರಿ. ಪ್ರತಿವಾದಿಯು ತನ್ನ ಕಟ್ಟಡದ ಸುತ್ತಲೂ ನೀರು ಹೊರ ಹೋಗಲು ಪೈಪುಗಳನ್ನು ಅಳವಡಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಕಟ್ಟಡದ ಉತ್ತರ ಭಾಗದಿಂದ ನನ್ನ ಸ್ವತ್ತಿಗೆ ಯಾವುದೇ ರೀತಿ ನೀರು ಹರಿದು ಬರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಪ್ರತಿವಾದಿ ಕಟ್ಟಡದ ಕಡೆಯಿಂದ ನನ್ನ ಸ್ವತ್ತಿನ ಕಡಗೆ ನೀರು ಹರಿದು ಬರುತ್ತಿದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

9) ಈ ಹಿಂದೆ ನನ್ನ ಮತ್ತು ಪ್ರತಿವಾದಿಯ ನಡುವೆ ಆದ ರಾಜೀ ಪ್ರಕಾರ ಈ ಪ್ರಕರಣದಲ್ಲಿನ ದಾವಾ ಬಿ ಅನುಸೂಚಿ ಸ್ವತ್ತಿನಲ್ಲಿ ಪ್ರತಿವಾದಿಯೇ ಗೋಡೆಯನ್ನು ಕಟ್ಟಿಕೊಳ್ಳಲು ಒಪ್ಪಿಗೆ ಆಗಿತ್ತು ಎಂದರೆ ಸರಿ. ನಮ್ಮ ಮನೆಯ ದಕ್ಷಿಣಕ್ಕೆ ಮಳೆ ನೀರು ಹಾಗೂ ಕಟ್ಟಡದ ನೀರು ಬೀಳದಂತೆ ಒಪ್ಪಿಗೆ ಆದ ಪ್ರಕಾರ ಪ್ರತಿವಾದಿಯು ಪ್ರಸ್ತುತ ರಾಜೀ ಮೇರೆಗೆ ಪೈಪುಗಳನ್ನು ಅಳವಡಿಸಿದ್ದಾರೆ ಎಂದರೆ ಸರಿಯಲ್ಲ. ರಾಜೀ ಪತ್ರದಲ್ಲಿ ಬರೆದ ಷರತ್ತುಗಳನ್ನು ನಾನು ಒಪ್ಪಿಕೊಂಡು ಪ್ರತಿವಾದಿಯಿಂದ ಹಣವನ್ನು ಸಹ ಪಡೆದಿರುತ್ತೇನೆ ಎಂದರೆ ಸರಿ. ರಾಜೀ ಅರ್ಜಿಯ ಪ್ರಕಾರವೇ ಪ್ರತಿವಾದಿಯು ಕಟ್ಟಡವನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ.

10) ದಾವಾ ಬಿ ಅನುಸೂಚಿ ಸ್ವತ್ತಿಗೆ ನೀಡಿದ ಚೆಕ್ಕುಬಂದಿ ಸರಿ ಇಲ್ಲ ಎಂದರೆ ಸರಿಯಲ್ಲ. ದಾವಾ 2 ನೇ ಐಟಂ ಸ್ವತ್ತಿನ ಉತ್ತರಕ್ಕೆ ದಾವಾ 1 ನೇ ಐಟಂ ಸ್ವತ್ತು ಬರುತ್ತದೆ ಎಂದರೆ ಸರಿಯಲ್ಲ. ದಾವಾ 2 ನೇ ಐಟಂ ಸ್ವತ್ತಿನ ಪಶ್ಚಿಮಕ್ಕೆ ಮಲ್ಲಿಕಾರ್ಜುನರವರ ಸ್ವತ್ತು ಇದೆ. ದಾವಾ ಬಿ ಅನುಸೂಚಿ ಸ್ವತ್ತಿನ ಉತ್ತರಕ್ಕೆ ನಮ್ಮದೇ ಸ್ವತ್ತು ಇದ್ದು, ಅಲ್ಲಿ ರಾಜಬೀದಿ ಇಲ್ಲ ಎಂದರೆ ಸರಿಯಲ್ಲ. ದಾವಾ ಬಿ ಅನುಸೂಚಿ ಸ್ವತ್ತನ್ನು ಈ ಹಿಂದೆ ಪ್ರತಿವಾದಿಗೆ ಬಿಟ್ಟು ಕೊಟ್ಟು ಆಕೆಯಿಂದ ಅದರ ಬದಲಾಗಿ ರೂ.10 ಸಾವಿರ ಹಣವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ವೈದ್ಯಾಧಿಕಾರಿ ಆಗಿರುವ ಕಾರಣ ಆಕೆಗೆ ಹೆದರಿಸಿದಲ್ಲಿ ಕಟ್ಟಡ ಕಾಮಗಾರಿ ನಿಲ್ಲಿಸಿ ಹಣವನ್ನು ಕೊಡುತ್ತಾರೆ ಎಂಬ ಕಾರಣಕ್ಕೆ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಪಂಚಾಯಿತಿದಾರರ ಸಮಕ್ಷಮ ದಿಃ 25.06.2016 ರಂದು ಕರಾರು ಪತ್ರ ಮಾಡಿಕೊಂಡಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಆ ರೀತಿ

ಕರಾರುಪತ್ರ ಆಗಿದ್ದು, ಅದರಂತೆ ಪ್ರತಿವಾದಿ ನಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ಕಟ್ಟಡದಲ್ಲಿ ಸೆಟ್ ಬ್ಯಾಕ್ ಬಿಟ್ಟಿರುತ್ತಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಪ್ರಶ್ನೆ ಮಾಡಲು ನನಗೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ರಾಜೀ ಅರ್ಜಿಯಲ್ಲಿ ಸೆಟ್ ಬ್ಯಾಕ್ ಮತ್ತು ಅಳತೆ ಬಗ್ಗೆ ಒಪ್ಪಿಕೊಂಡ ಕಾರಣ ಈ ಪ್ರಸ್ತುತ ದಾವೆಯಲ್ಲಿ ಕೇಳಿದ ಪರಿಹಾರವನ್ನು ಪಡೆಯಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಈ ಹಿಂದೆ ರಾಜೀ ಪ್ರಕಾರ ಪ್ರತಿವಾದಿ ಕಟ್ಟಡ ಕಟ್ಟಿರುವ ಕಾರಣ ಪ್ರಸ್ತುತ ದಾವೆ ಊರ್ಜಿತ ಅಲ್ಲ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಕೇಳಿದ ಪರಿಹಾರಕ್ಕೆ ಪೂರಕವಾಗಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯಿಂದ ಅಕ್ರಮ ಲಾಭ ಹೊಂದುವ ಸಲುವಾಗಿ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**